ಕೆಲವು ದಿನಗಳ ಬಳಿಕ, ಒಂದು ಶನಿವಾರದಂದು ನಾನು ನನ್ನ ಮನೆಯ ಎದುರಿನ ಅಂಗಳದಲ್ಲಿದ್ದಾಗ, ಇನ್ನೊಂದು ದಿಕ್ಕಿನಿಂದ ನೆರೆಮನೆಯವಳು ತನ್ನ ಅಂಗಳದಿಂದ ನನ್ನ ಬಳಿಗೆ ಬಂದಳು. ಅವಳು ಸುಮಾರು ಹತ್ತು ಅಡಿ ದೂರದಲ್ಲಿ ನಿಂತಿದ್ದಳು. ಅವಳು ಮೂವತ್ತೈದು ಮೂವತ್ತೇಳರ ಮಹಿಳೆಯಾಗಿದ್ದಳು. ಬಿಳಿ ಹೆಣ್ಣುಮಕ್ಕಳ ವಯಸ್ಸನ್ನು ಅಂದಾಜಿಸುವುದು ಕಷ್ಟ. ಅವರು ಮೇಕ್‌ಅಪ್ ಇಲ್ಲದೆ ಹೊರಗೆ ಕಾಲಿಡುವುದಿಲ್ಲ. ಅಗತ್ಯ ಬಿದ್ದರೆ ಅವರು ತಮ್ಮ ಮುಖದ ಸುಕ್ಕುಗಳನ್ನು ಇಂಜೆಕ್ಷನ್ ಹಾಕಿಸಿಕೊಂಡು ಕೆಲವು ಕಾಲದವರೆಗೆ ಅಳಿಸಿಕೊಳ್ಳುತ್ತಾರೆ.

ಅವಳು ಅಲ್ಲಿಯೇ ನಿಂತು ನನ್ನ ಪರಿಚಯ ಮಾಡಿಕೊಂಡಳು. ತನ್ನ ಹೆಸರು ಕೈಟಲೀನ್ (ಕೈಟಿ), ನಿನ್ನಂಥ ಯುವಕ ನನ್ನ ಪಕ್ಕದಲ್ಲಿರುವುದು ನನಗೆ ಇಷ್ಟವಾಯಿತು ಎಂದಳು.

"ನಿನ್ನ ಹೆಂಡತಿ ಎಲ್ಲಿ? ಅವಳನ್ನೂ ಭೇಟಿಯಾಗಿದ್ದರೆ ಚೆಂದವೆನಿಸುತ್ತದೆ."

"ನನಗಿನ್ನೂ ಮದುವೆಯಾಗಿಲ್ಲ. ಆದರೆ, ಭಾರತದಲ್ಲಿ ನನ್ನ ಸ್ನೇಹಿತೆಯೊಬ್ಬಳಿದ್ದಾಳೆ, ಅವಳು ಶೀಘ್ರವೇ ಇಲ್ಲಿಗೆ ಬರುತ್ತಾಳೆ."

ನನ್ನ ಭಾವಿ ಪತ್ನಿ ಎನ್ನುವುದಕ್ಕಿಂತ ನನ್ನ ಸ್ನೇಹಿತೆ ಎನ್ನುವುದು ಇಷ್ಟವಾಯಿತು. ಆದರೆ, ಕೈಟಿ ದೂರದಿಂದಲೇ ಪರಿಚಯಿಸಿಕೊಂಡಿದ್ದು ಕೆಡುಕೆನಿಸಿತ್ತು. ಕೈಟಿ ಮತ್ತೇನೂ ಮಾತನಾಡದೆ ಕೂಡಲೇ ತನ್ನ ಮನೆಗೆ ಹೊರಟು ಹೋಗಿದ್ದಳು. ಅವಳು ಹೀಗೆ ಹೋಗಿದ್ದು ಸಹ ಅಶಿಷ್ಟತೆ ಎಂದು ಅನ್ನಿಸಿತ್ತು.

ಅಂದು ರವಿವಾರವಾಗಿದ್ದು, ಇಲೇನ್ ತನ್ನ ವರಾಂಡದಲ್ಲಿ ಕೂತಿದ್ದಳು. ನಾನು ಅವಳೊಂದಿಗೆ ಮಾತನಾಡಲು ಹೋದೆ. ಮಾತಿನ ಮಧ್ಯೆ ನಾನು ಅವಳನ್ನು ನನ್ನ ನೆರೆಯವಳ ಬಗ್ಗೆ ವಿಚಾರಿಸಿದಾಗ ಅವಳು ಹೇಳಿದಳು:

"ಕೈಟಿಯ ವಿಚ್ಛೇದನವಾಗಿ ಮೂರು ವರ್ಷಗಳಾಗಿವೆ. ಬೀದಿಯ ಜನರು ಮತ್ತು ಕೋರ್ಟ್‌ನಿಂದಾಗಿ ಅವಳು ತುಂಬಾ ಅವಮಾನವನ್ನು ಎದುರಿಸಬೇಕಾಯಿತು. ಆದರೆ, ವಿಚ್ಛೇದನದ ಬಳಿಕ ಅವಳಿಗೆ ಮನೆ ಸಿಕ್ಕಿತು, ಸ್ವಲ್ಪ ಹಣವೂ ಸಿಕ್ಕಿತು. ಆದರೆ, ಅವಳು ಮಾನಸಿಕವಾಗಿ ಸ್ವಲ್ಪ ಕುಸಿದಳು. ಈಗ ಮೊದಲಿಗಿಂತ ಸ್ವಲ್ಪ ಉತ್ತಮ, ಅದರೆ ಹೆಚ್ಚಿಲ್ಲ. ಒಮ್ಮೊಮ್ಮೆ ಅವಳಿಗೆ ವಾಸ್ತವಿಕತೆಯ ಅರಿವಾಗುವುದಿಲ್ಲ. ಅವಳಿಗೆ ಬಚ್ಚಿಟ್ಟ ವಸ್ತುಗಳು ಸಹ ಕಾಣಲಾರಂಭಿಸುತ್ತವೆ. ಏನೇನೋ ಮಾತನಾಡುತ್ತಾಳೆ, ಕೆಲವು ಸಲ ಉಪದೇಶವನ್ನೂ ಮಾಡುತ್ತಾಳೆ."

"ಅವಳ ಮಾನಸಿಕ ಪರಿಸ್ಥಿತಿಯನ್ನು ಕೇಳಿ ನನಗೆ ದುಃಖವಾಗಿದೆ. ಇಲೇನ್, ನೀವೂ ಸಹ ಒಂಟಿ. ನಿಮಗೆ ಏನಾದರೂ ಬೇಕೆನಿಸಿದರೆ ಅಥವಾ ನನ್ನಿಂದ ಏನಾದರೂ ಕೆಲಸವಾಗಬೇಕೆಂದಿದ್ದರೆ, ಫೋನ್ ಮಾಡಿ. ಇದನ್ನು ನನ್ನ ಹೃದಯದಾಳದಿಂದ ಹೇಳುತ್ತಿದ್ದೇನೆ." ಎಂದೆ.

"ನೀನು ಒಳ್ಳೆಯ ಮನುಷ್ಯ. ನಿನ್ನ ಮಾತು ನನಗೆ ನೆನಪಿರುತ್ತದೆ. ನನಗೆ ನಿನ್ನ ಆಶ್ರಯದ ಅಗತ್ಯ ತುಂಬಾ ಇದೆ. ನನ್ನ ಮಗ ನ್ಯೂಯಾರ್ಕ್ ಸಿಟಿಯಲ್ಲಿದ್ದಾನೆ. ಅವನು ಸಂಪೂರ್ಣವಾಗಿ ತನ್ನ ಹೆಂಡತಿಯ ಜೇಬಿನೊಳಗಿದ್ದಾನೆ. ಅವನೆಂದೂ ಫೋನ್ ಸಹ ಮಾಡುವುದಿಲ್ಲ. ನನ್ನ ಮಗಳು ಅಮೆರಿಕದ ಫಾರಿನ್ ಮಿನಿಸ್ಟರಿಯಲ್ಲಿ ನೌಕರಿ ಮಾಡುತ್ತಾಳೆ. ಅವಳು ಸಾಮಾನ್ಯವಾಗಿ ಒಂದಲ್ಲ ಒಂದು ದೇಶದ ಎಂಬೆಸಿಗೆ ಹೋಗಬೇಕಾಗುತ್ತದೆ. ಈಗ ಅವಳು ಜರ್ಮನಿಯ ಬರ್ಲಿನ್‌ನಲ್ಲಿದ್ದಾಳೆ."

ಅದೊಂದು ದಿನ ಕೈಟಿ ತನ್ನ ಮುಂದಿನ ಅಂಗಳದಲ್ಲಿ ಹಾಡುತ್ತಿದ್ದಳು. ಅದರೊಂದಿಗೆ ಮೆಲ್ಲ ಮೆಲ್ಲನೆ ನೃತ್ಯಿಸುತ್ತಿದ್ದಳು. ಅವಳು ಹೀಗೆ ನೃತ್ಯಿಸುವುದು ನನಗೆ ವಿಚಿತ್ರವೆನಿಸಿತು. ಅವಳನ್ನು ಸಮೀಪದಿಂದ ನೋಡಲು, ಪತ್ರಿಕೆಯ ನೆಪ ಮಾಡಿ ಅವಳ ಅಂಗಳಕ್ಕೆ ಹೋದೆ. ಲೋ ಕಟ್‌ನ ಕೆಂಪು ರವಿಕೆ ಅವಳ ಶ್ವೇತ ವರ್ಣದ ಕಾಂತಿಯನ್ನು ಹೆಚ್ಚಿಸುತ್ತಿತ್ತು. ಅವಳ ಬಾಹುಗಳು ನಗ್ನವಾಗಿದ್ದವು. ಅವಳು ಸ್ವಲ್ಪ ಹೊತ್ತು ಅದೇ ಮಸ್ತಿಯಲ್ಲಿದ್ದಳು. ಅನಂತರ ನನ್ನನ್ನು ನೋಡಿ ಹೇಳಿದಳು, "ನೀನು